ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

EE/BTP/BBMP/E-PMT/03/2020-21, Date: 28.05.2020 ಅಂದಾಜು ಮೊತ್ತ ರೂ.2000.00 ಲಕ್ಷಗಳ ಕಾಮಗಾರಿಯು ಯಲಹಂಕ ವಲಯಕ್ಕೆ 2019–20ನೇ ಸಾಲಿನ P-3158 ಲೆಕ್ಕ ಶೀರ್ಷಿಕೆಯಡಿಯಲ್ಲಿ ಸೇರ್ಪಡೆಗೊಂಡಿದ್ದು, ಸದರಿ ಕಾಮಗಾರಿಗೆ ಬ್ಯಾಟರಾಯನಪುರ ವಿಭಾಗದಿಂದ ಇ–ಪ್ರಕ್ಯೂರ್‌ಮೆಂಟ್ ಮುಖೇನ ದಿನಾಂಕ: 28.05.2020 ರಂದು ಟೆಂಡರ್ ಕರೆಯಲಾಗಿರುತ್ತದೆ.

1	ಕಾಮಗಾರಿಯ ಅಂದಾಜು ಮೊತ್ತ	ರೂ.2000.00 ಲಕ್ಷಗಳು
2	ಟೆಂಡರ್‌ಗಿಟ್ಟ ಮೊತ್ತ	ರೂ.167712221.34
3	ಅನುದಾನ	P3158 SIP Infrastructure Project works
4	ಕಾಮಗಾರಿ ಸಂಕೇತ ಸಂಖ್ಯೆ	006-20-000195
5	ಟೆಂಡರ್‌ನ ಸ್ವರೂಪ	ಐಟಂವಾರು
6	ಟೆಂಡರ್ ನೋಟಿಫಿಕೇಷನ್ ಸಂಖ್ಯೆ	EE/BTP/BBMP/E-PMT/03/2020-21 Date: 28.05.2020.
7	ಟೆಂಡರ್ ನೋಟಿಫಿಕೇಷನ್ ಪ್ರಕಟಣೆ ವಿವರ	ವಿಜಯಕರ್ನಾಟಕ, The Hindu Date: 29.05.2020.
8	ಪೂರ್ವ ಬಿಡ್ ಸಭೆಯ ವಿವರ	ದಿನಾಂಕ: 10.06.2020 ಮಧ್ಯಾಹ್ನ 3.00 ಗಂಟೆಗೆ
9	ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ದಿನಾಂಕ	ದಿನಾಂಕ: 16.06.2020, 04.00 ಗಂಟೆವರೆಗೆ
10	ತಾಂತ್ರಿಕ ಬಿಡ್‌ನ್ನು ತೆರೆಯಲಾದ ದಿನಾಂಕ	ದಿನಾಂಕ: 17.06.2020 ಮಧ್ಯಾಹ್ನ 4.05 ಗಂಟೆಗೆ
11	ಟೆಂಡರ್ ಸಿಂಧುತ್ವದ ಅವಧಿ	90 ದಿನಗಳು

43 ಸದರಿ ಕಾಮಗಾರಿಯನ್ನು ಐಟಂವಾರು ದರಗಳಂತೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಪ್ರಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆ EE/BTP/BBMP/E-PMT/03/2020-21, Date: 28.05.2020 ರಂತೆ ಕಾಮಗಾರಿ ಇಂಡೆಂಟ್ ಸಂಖ್ಯೆ: **42315** ರಂತೆ ನಿಗಧಿಪಡಿಸಿ ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ದಿ:16.06.2020 ರಂದು ಸಂಜೆ 4.00 ಗಂಟೆವರೆಗೆ ನಿಗದಿಪಡಿಸಲಾಗಿರುತ್ತದೆ, ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ಡನ್ನು ದಿನಾಂಕ: 15.06.2020 ಸಂಜೆ 4.05 ಗಂಟೆಗೆ ತೆರೆಯಲಾಗಿದ್ದು, ಸದರಿ ಕಾಮಗಾರಿಗೆ ಐದು ಜನ ಗುತ್ತಿಗೆದಾರರು ಈ ಕೆಳಕಂಡಂತೆ ಭಾಗವಹಿಸಿರುತ್ತಾರೆ.

1. Sri. **C R GIRISH (RAM AND COMPANY)**
2. Sri. **M S VENKATESH (M S V CONSTRUCTIONS COMPANY)**
3. Sri. **S T RAMESH (Ganapathi Stone Crusher)**
4. Sri. **EARANNA MAMADAPUR (ERANNA MAMADAPUR)**
5. Sri. **G CHANDRE GOWDA (GOVINDAPPA CHANDRE GOWDA) (DRAFT)**

44 ಸದರಿ ಗುತ್ತಿಗೆದಾರರು ಸಲ್ಲಿಸಿರುವ ಕಾಮಗಾರಿ ದೃಢೀಕರಣ ಪತ್ರ (Work Done Certificate), Line of Credit ದಾಖಲಾತಿಗಳನ್ನು ಇಲಾಖೆಯಿಂದ ನೀಡಿರುವ ಬಗ್ಗೆ ಮರುದೃಢೀಕರಣ ಪಡೆಯಲು ಪ್ರತಿಗಳನ್ನು ಸಿದ್ದಪಡಿಸಿ ತಮ್ಮ ಸಹಿಗಾಗಿ ಮಂಡಿಸಿದೆ.

22/07

45 ಕಾ.ಪಾ.ಅ (ಬ್ಯಾ.ವಿ)

22/07

ವಿಷಯ : ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
4	ಈ ಕೆಳಕಂಡ ಕೋಷ್ಠಕದಂತೆ ಬಿಡ್‌ದಾರರಾದ (1) Sri. C.R. Girish, (2) Sri. M S Venkatesh (M S V Constructions Company), (3) Sri. Earanna Mamadapur (Eranna Mamadapur) ಮತ್ತು (4) Sri. S T Ramesh (Ganapathi Stone Crusher) ರವರುಗಳು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಹಾಗೂ ಮರು ಧೃಢೀಕರಣ ಪತ್ರಗಳನ್ನು ಈ ಕಛೇರಿಗೆ ಸಲ್ಲಿಸಿರುವಂತೆ ಈ ಕೆಳಕಂಡ ಬಿಡ್‌ದಾರರು ತಾಂತ್ರಿಕವಾಗಿ ಅರ್ಹರಾಗಿದ್ದು, ತಾಂತ್ರಿಕ ಬಿಡ್ ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

Sl. No.	Eligibility Criteria	Requirements as per Eligibility Criteria / Name of the Agency	C R GIRISH (RAM AND COMPANY)	S T RAMESH (Ganapathi Stone Crusher)	M S VENKATESH (M S V CONSTRUCTIONS COMPANY)	EARANNA MAMADAPUR (ERANNA MAMADAPUR)
1	Registration	Class I A	BBMP Registration Certificate of CLASS I CIVIL Contractor, No. CBS/C1/CIVIL/971/2015, Dated:13-04-2015 Validity till 12.04.2020	BBMP Registration Certificate of CLASS I CIVIL Contractor, No. CBS/C1/CIVIL/12096/2020, Dated:28-04-2020 Validity till 27.04.2025		
2	EMD	As per 13.1 of KW4 Rs.2000000 Lakhs	Rs.2000000.00/- Paid Through NEFT E-Proc Protal	Rs.2000000.00/- Paid Through NEFT E-Proc Protal	EMD Amount of Rs.100000 is Paid through NEFT,Remaining of Amount of Rs.1900000 is not Submitted through BG. **Rejected due to Non submission of EMD Amount**	EMD Amount of Rs.100000 is Paid through NEFT,Remaining of Amount of Rs.1900000 is not Submitted through BG. **Rejected due to Non submission of EMD Amount**
3	Financial Turnover	Clause 3.2(a) Achieved a Minimum Financial turnover (in all classes in Civil Engineering construction work only) of Rs.40.00 Cr in atleast two financial years from 2013-14 to 2018-19				
		2018-19 (in Rs Lakhs)	-	234,83 Cr		
		2017-18 (in Rs Lakhs)	81.46 Cr	157,13 Cr		
		2016 - 17 (in Rs. Lakh)	73,98 Cr	109,65 Cr		
		2015 – 16 (in Rs. Lakh)	64,31 Cr	63,63 Cr		
		2014 – 15 (in Rs. Lakh)	52,62 Cr	41,00 Cr		
		2013-14 (in Rs.Lakhs)	46,18 Cr	-		
4	Work exerperience Financial	Clause 3.2(b) satisfactorily completion as a prime contractor for one similar nature of work value not less than Rs.30.Crores in any of financial years from 2015-16 to 2019-20	Workdone certificate is issued by Executive Engineer Byatarayanapura Division, Yelahanka Zone. No: BBMP/BTP/EE/98/2018-19 Date:27.11.2018	Workdone certificate is issued by Executive Engineer N H Division, No: EE / NHDB / WDC / AB/AA-2/2019-20,		
	Clause 3.2(c) Executed in any one year, the minimum quantities of work.	Earth Ework Excavation 35509.00 Cum	150888.96	50592.6		
		Construction of GSB/WMM 16135.0 Cum	19701.59	53980.75		
		BM/BC 6326.00 Cum	10401.88	13863.22		

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ			ಟಿಪ್ಪಣಿಗಳು ಮತ್ತು ಆಜ್ಞೆಗಳು					
			Concrete Works M10, M15, M20, M30 6025.00 Cum	6070.11	26002.49			
			TMT Steel 87 MT	106.69	654.57			
			Granite Slabs/Precast slabs 2740 Sqm	4402.35	35622			
5		Credit Facility	Clause 3.3(b) Liquid assets and /or availability of credit facilities of not less than Rs.500.00 Lakhs . Credit lines/letter of credit certificated from banks for meeting the fund requirements etc.	Issued by Karnataka Bank Ltd, Banaswadi, Ref.No:BLR.BNS/PF 696/OR/ 2020.21 Date:12.06.2020 Rs.500.00 Lakhs	Issued by Vijaya Bank Ref. No: KGR/AGM/MISC/2020.21 ,Date:15.06.2020 Rs500.00 Lakhs			
6		Tender capacity	3.6 Tenderers who meet the above specified minimum qualifying criteria will only be qualified if their available tender capacity is more than the total tender value (i.emore then Rs.2000.00 Lakhs) the available tender capacity will be calculated as under available tender capacity = (AXNX1.5)-B Where A= Maximum value of civil engineering works executed in any one year during the last five years taking into account the completed as well as works in progress N= Number of years prescribed for completion of the works for which tender are invited B= Value at the existing commitments and on going works to be completed during the next one year (period of completion of the works for which tenders are invited)	2270.70 Lakhs	129.27 Cr			
7			Remarks	Qualified	Qualified	Not Qualified	Not Qualified	

ಕಾರ್ಯಪಾಲಕ ಅಭಿಯಂತರರು 2/09
ಬ್ಯಾಟರಾಯನಪುರ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರ ಕಛೇರಿ
04 SEP 2020
457
ಬಿ.ಬಿ.ಎಂ.ಪಿ/ಯಲಹಂಕ ವಲಯ.

ಪು.ತಿ.ನೋ

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

48)

ಪ್ರಸ್ತಾಪಿತ ಕಾಮಗಾರಿಯು 2017-18ನೇ ಸಾಲಿನ ಬೆಂಗಳೂರಿಗೆ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆಯಡಿ ಒದಗಿಸಿರುವ ರೂ 2191.00 ಕೋಟಿ ಅನುದಾನದಲ್ಲಿ ಟೆಂಡರ್ ಶ್ಯೂರ್ ಮಾದರಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಬೆಂಗಳೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡಿರುವ ಕ್ರಿಯಾಯೋಜನೆಯನ್ನು ಪರಿಷ್ಕರಿಸಿ ದಿನಾಂಕ:21-01-2020 ರಂದು ಘನ ಕರ್ನಾಟಕ ಸರ್ಕಾರವು ಆದೇಶ ಹೊರಡಿಸಿದ್ದು ಕ್ರಮ ಸಂಖ್ಯೆ:102 ರಿಂದ 117ರವರೆಗೆ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರಕ್ಕೆ ಒಟ್ಟು 16ಕಾಮಗಾರಿಗಳನ್ನು ಕೈಗೊಳ್ಳಲು ಲೆಕ್ಕಶೀರ್ಷಿಕೆ ಪಿ-3158 ರಡಿ ರೂ55.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಅದರಂತೆ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗರವರು ಪ್ಯಾಕೇಜ್‌ವಾರು ಮಾಡಿ ಟೆಂಡರ್ ಕರೆಯಲಾಗಿದ್ದು, ಮೇಲ್ಕಂಡ ಪ್ಯಾಕೇಜ್ ಸಂಖ್ಯೆ-03ರಲ್ಲಿ (ಒಟ್ಟು 5 ಕಾಮಗಾರಿಗಳು ರೂ 20.00 ಕೋಟಿ)ನಾಲ್ಕು ಜನ ಗುತ್ತಿಗೆದಾರರು ಭಾಗವಹಿಸಿದ್ದು, ತಾಂತ್ರಿಕವಾಗಿ ಇಬ್ಬರು Sri.C.R Girish (Ram&company), 2)Sri.S.T.Ramesh (Ganapathy Stone Crusher) ಅರ್ಹರಾಗಿದ್ದು, ಸದರಿಯವರ ತಾಂತ್ರಿಕ ಬಿಡ್‌ನ್ನು ಅನಮೋದನೆಗಾಗಿ ಮಾನ್ಯ ಆಯುಕ್ತರವರ ಅಧ್ಯಕ್ಷತೆಯ ತಾಂತ್ರಿಕ ಬಿಡ್ ಮೌಲ್ಯಮಾಪನ ಸಮತಿಯ ಮುಂದೆ ಮಂಡಿಸಲು ಆದೇಶಕ್ಕಾಗಿ ಸಲ್ಲಿಸಿದೆ.

49) ಮುಖ್ಯ ಲೆಕ್ಕಾಧಿಕಾರಿಗಳು ಕಂಡಿಕೆ (45) ರಂತೆ (48) ರ ಹಾಳೆ ವಿವರಿಸಿರುವಂತೆ ಮೇಲ್ಕಂಡ ತ್ಯಾಕೇಜ್‌ಗೆ ಸಂಬಂಧಿಸಿದಂತೆ ಸಿವಿಲ್ ಮುಖ್ಯ ಎಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಬಿಡ್ ಮೌಲ್ಯಮಾಪನ ಸಮಿತಿಯ ಮುಂದೆ ಮಂಡಿಸಲು ಆದೇಶಿಸಿದೆ.

ಮುಖ್ಯ ಲೆಕ್ಕಾಧಿಕಾರಿಗಳು
ಮುಖ್ಯ ಆಯುಕ್ತರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

50 ಮಾನ್ಯ ಆಯುಕ್ತರು (ಯು.ವಿ)

ಕೆಳಕ್ಕಿನ ಮೇಲ್ ಮೇಕ್ ಸೆಕಾಕೆಯ ಮೂಡ ಮಂಡಿಸಲು.
ಮೆಟ್ರಿ ಅವಾನ ವಿಚಾರಿಸಲು ತಿಳಿದೆ.

11/9/20
ವಿಶೇಷ ಆಯುಕ್ತರು (ಆಸ್ತಿಗಳು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

15/22
11/09/2020

51 ಮುಖ್ಯ ಆಯುಕ್ತರು

Dn 16/9/2020 ಪ
6 pm ಪ IIP

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
52	ಮು.ಒ.(ಯು.ವ) ಅ.16.9.2020 ರಂದು ನಡೆದ ವಿಲ್ಲರ್ಸ್‌ಪಾರ್ಕ್ ಮೈದಾನ ಕಾಮಗಾರಿ ಸಂಬಂಧ ನಡೆದ ಸಭೆಯಲ್ಲಿ, ಕಾಮಗಾರಿಯನ್ನು ತಡವಾಗಿ, ಕಾಮಗಾರಿ ಮಂಡಿಸಿದೆ. 16/9.
53	ಮುಂದಿನ ಆಯುಕ್ತರಿಗೆ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (53) ರಲ್ಲಿ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್ಡನ್ನು ತೆರೆಯಲು ಮಾನ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 16-09-2020 ರಂದು ನಡೆದ ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರಸಂಧಾನ ಸಮಿತಿಯಿಂದ ಅನುಮೋದನೆ ಪಡೆಯಲಾಗಿದ್ದು, (ಇದಕ್ಕೆ ಸಂಬಂಧಿಸಿದ ತಾಂತ್ರಿಕ ಮೌಲ್ಯಮಾಪನ ತುಲನಾತ್ಮಕ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದೆ, ಅನುಬಂಧ-1) ಅದರಂತೆ ಆರ್ಥಿಕ ಬಿಡ್‌ನ್ನು ದಿನಾಂಕ: 25.09.2020 ರಂದು ತೆರೆಯಲಾಗಿದ್ದು ವಿವರಗಳು ಈ ಕೆಳಕಂಡಂತಿದೆ.

ಕ್ರ ಸಂ	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಗಿಟ್ಟಿ ಮೊತ್ತ ರೂ.ಗಳಲ್ಲಿ	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ)	ಅನುಮೋದಿತ ಎಸ್.ಆರ್. ದರಗಳಿಗೆ ಹೋಲಿಸಿದಾಗ
1	Sri. C R GIRISH (RAM AND COMPANY)	2000.00	16,77,12,221.00	175927712.90	4.89% ಹೆಚ್ಚು
2	Sri. S T RAMESH (Ganapathi Stone Crusher)			185587057.04	10.65% ಹೆಚ್ಚು

ಈ ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ ಸದರಿ ಪ್ಯಾಕೇಜಿನ ಟೆಂಡರ್‌ಗಿಟ್ಟ ಮೊತ್ತ ರೂ.16,77,12,221.00 (ರೂಪಾಯಿ ಹದಿನಾರು ಕೋಟಿ ಎಪ್ಪತ್ತೇಳು ಲಕ್ಷ ಹನ್ನೆರಡು ಸಾವಿರದ ಎರಡು ನೂರ ಇಪ್ಪತ್ತೊಂದು ಮಾತ್ರ) ಗಳಿಗೆ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಅದರಲ್ಲಿ ಎಲ್-1 ಗುತ್ತಿಗೆದಾರರಾದ **Sri. C R GIRISH (RAM AND COMPANY)** ರವರು ನಮೂದಿಸಿರುವ ಟೆಂಡರ್ ಮೊತ್ತ **ರೂ.17,59,27,712.90** (ಹದಿನೇಳು ಕೋಟಿ ಐವತ್ತೊಂಭತ್ತು ಲಕ್ಷ ಇಪ್ಪತ್ತೇಳು ಸಾವಿರದ ಏಳು ನೂರ ಹನ್ನೆರಡು ಮತ್ತು ಪೈಸೆ ತೊಂಭತ್ತು ಮಾತ್ರ) ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.4.89% ಹೆಚ್ಚು ಇದ್ದು, ಸದರಿ ಟೆಂಡರ್‌ಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ ಅನುಮೋದನೆ ಪಡೆಯಲು ಕಡತವನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸಿದೆ.

ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ)

ಮುಖ್ಯ ಅಭಿಯಂತರರು (ಯ.ವ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಲಂ 57 (1) ರಲ್ಲಿ ವಿವರಿಸಿರುವಂತೆ ಮೇಲ್ಕಂಡ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಮತ್ತು ಆಯುಕ್ತರ ಹಂತದಲ್ಲಿ ಅನುಮೋದನೆ ಪಡೆಯಲು ಅನುಕೂಲವಾಗುವಂತೆ ಕಡತವನ್ನು ಮಂಡಿಸಲಾಗಿದೆ.

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಪತ್ ಬೆಂಗಳೂರು ಮಹಾನಗರ ಪಾಲಿಕೆ.

57 ಮಾನ್ಯ ವಿಶೇಷ ಆಯುಕ್ತರು(ಮೂ.ಪ)

ಸಂ:1877
12/10/2020

ಮೇಲ್ಕಂಡ ಎಲ್ಲಾ ಕಂಡಿಕೆಗಳನ್ನು ತಮ್ಮ ಅವಗಾಹನೆಗೆ ತರುತ್ತಾ, Improvements to roads and Drains at Thanisandra, dasarahalli Saraipalya, Bharathnagara, Rachenahalli and Surronding area in ward no:06 and 07 ಕಾಮಗಾರಿ ಅಂದಾಜು ಮೊತ್ತ ರೂ.2000.00 ಲಕ್ಷಗಳಿಗೆ 2019–20ನೇ ಸಾಲಿನ ಪಿ–3158ರಲ್ಲಿ ಜಾಬ್ ಸಂಖ್ಯೆ:006–20–000195 ಪಡೆಯಲಾಗಿರುತ್ತದೆ.

58 ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾಗಿರುವಂತೆ ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರು(ಬ್ಯಾಟರಾಯನಪುರ ಯಲಹಂಕ ವಿಭಾಗ)ರವರ ಕಛೇರಿಯಿಂದ ದಿನಾಂಕ:28–05–2020ರಂತೆ ಟೆಂಡರ್ ಅನ್ನು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ದಿನಾಂಕ:16–06–2020ರಂದು ಟೆಂಡರ್‌ನ್ನು ತೆರೆಯಲಾಗಿ ನಾಲ್ಕು ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿರುತ್ತಾರೆಂದು ಕಂಡಿಕೆ 44ರಲ್ಲಿ ವಿವರಿಸಲಾಗಿದೆ.

1. Sri.C R Girish (Ram and Company)
2. Sri. M S Venkatesh (M S V Constructions Company)
3. Sri.S T Ramesh (Ganapathi Stone Crusher)
4. Sri. G Chandra Gowda(Govindappa Chandre Gowda) (Draft)

59 ದಿನಾಂಕ:16–09–2020ರಂದು ಮಾನ್ಯ ಆಯುಕ್ತರವರ ಟೆಂಡರ್ ತಾಂತ್ರಿಕ ಪರಿಶೀಲನಾ ಸಮಿತಿ ಸಭೆಯಲ್ಲಿ ಸದರಿ 1. Sri. C R Girish (Ram and Company) ಮತ್ತು 2. Sri. S T Ramesh (Ganapathi Stone Crusher)ರವರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ. ತಾಂತ್ರಿಕ ಮೌಲ್ಯ ಮಾಪನ ಸಮಿತಿಯ ಸಭೆಯ ನಡುವಳಿಗಳನ್ನು ಕಡತದಲ್ಲಿ ಲಗತ್ತಿಸಿದೆ.

ಸದರಿ ಟೆಂಡರ್‌ದಾರರ ಆರ್ಥಿಕ ಬಿಡಾ ತೆರೆಯಲಾಗಿ ಎಲ್–1ರಾಗಿ Sri. C R Girish (Ram and Company) ರವರು ಆಯ್ಕೆಯಾಗಿದ್ದು, ಸದರಿ ಗುತ್ತಿಗೆದಾರರು ಟೆಂಡರ್‌ಗಿಟ್ಟ ಮೊತ್ತ ಸಂಧಾನದ ದರಗಳಂತೆ 2018–19ನೇ ಸಾಲಿನ ಅನುಮೋದಿತ ದರಗಳಿಗೆ ಹೋಲಿಸಿದಾಗ ಶೇ.4.89% ಹೆಚ್ಚಾಗಿದ್ದು, ಮುಖ್ಯ ಅಭಿಯಂತರರು(ಯಲಹಂಕ)ರವರ ಶಿಫಾರಸ್ಸಿನಂತೆ, ಎಲ್–1 ಗುತ್ತಿಗೆದಾರರು ನಮೂದಿಸಿರುವ ದರಗಳಿಗೆ ಸಂಬಂಧಿಸಿದಂತೆ ಮಾನ್ಯ ಆಯುಕ್ತರವರ ಆರ್ಥಿಕ ಮೌಲ್ಯಮಾಪನ ಸಮಿತಿಯ ಮುಂದೆ ಮಂಡಿಸುವ ಸಂಬಂಧ ಸಮಿತಿ ಸಭೆಯ ದಿನಾಂಕ ನಿಗಧಿಪಡಿಸಲು ಕೋರಿದೆ.

ವಿಶೇಷ ಆಯುಕ್ತರು(ಆಸ್ತಿಗಳು) ಹಾಗೂ
ವಲಯ ಆಯುಕ್ತರು(ಯಲಹಂಕ), ಬಿಬಿಎಂಪಿ

60 ಮಾನ್ಯ ಆಯುಕ್ತರು On 14/10/2020 at 6 PM ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಷಯ : ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮುಖ್ಯ ಅಭಿಯಂತರರ ಕಛೇರಿ
ಬಿ.ಬಿ.ಎಂ.ಪಿ.ಯಲಹಂಕ ವಲಯ.
01 OCT 2020
616

61 CE (Yelahanka)

ದಿನಾಂಕ. 14.10.2020 ರಂದು ಮೇನ್ಸ್ ಆಯುಕ್ತರ ಸಿಸ್ಟ್ಯಾಟ್‌ರವರು ನಡೆಸಿದ ಪೌರಕಾರ್ಮಿಕರ ಮೇಲ್ಮನವಿ ಪ್ರಾಧಿಕಾರಿಯು ನಡುವಳಿಯನ್ನು ಕುರಿತ ಅಭಿಪ್ರಾಯಗಳನ್ನೆ ಮೇಲ್ಕ್ರ ಪತ್ರಕ್ಕಾಗಿ ಮಂಡಿಸಿದೆ.

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮೇನ್ಸ್ ಆಯುಕ್ತರು

ಬಿ.ಬಿ.ಎಂ.ಪಿ. ಆಯುಕ್ತರ ಆಪ್ತ ಕಾರ್ಯದರ್ಶಿಯವರು
ಸಂಖ್ಯೆ: ಬಿ.ಬಿ.ಎಂ.ಪಿ/ಆ.ಆ.ಕಾ/ಆರ್.ಟಿ.ಐ/ಮೇ.ಪ್ರ/ಪೌ.ಕಾ/ 4019/2020-21
ದಿನಾಂಕ: 16.10.2020

ಮಂಜೂರು ಮಾಡಿದ ಅಧಿಕಾರಿಯ ಹುದ್ದೆ ಮತ್ತು ಸಹಿ
ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಿ/-
ದಿನಾಂಕ: 05/12

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರದ ಆದೇಶ ಸಂಖ್ಯೆ: ನಅಇ 175 ಎಂಎನ್‌ವೈ 2019ರ ಪ್ರಸ್ತಾವನೆ, ಆದೇಶ ಹಾಗೂ ಷರತ್ತು ಭಾಗಗಳಲ್ಲಿ ನಮೂದಿಸಿರುವ ಆದೇಶ ಸಂಖ್ಯೆ: ನಅಇ 175 ಎಂಎನ್‌ವೈ 2017, ದಿನಾಂಕ: 26-12-2017 ಎಂಬುದರ ಬದಲಾಗಿ ಆದೇಶ ಸಂಖ್ಯೆ: ನಅಇ 185 ಎಂಎನ್‌ವೈ 2017, ದಿನಾಂಕ: 26-12-2017ರ ತಿದ್ದುಪಡಿ ಆದೇಶ ಸಂಖ್ಯೆ: ನಅಇ 128 ಎಂಎನ್‌ವೈ 2019, ದಿನಾಂಕ: 23-01-2020 ರಲ್ಲಿ Package-3 1) Improvements to roads and drains at Thanisandra and Surrounding area in ward no 06 Byatarayanapura Sub Division 2) Improvements to roads and drains at Dasarahalli and Surrounding area in ward no 06 Byatarayanapura Sub Division 3) Improvements to roads and drains at Saraipalya, Bharathnagara and Surrounding area in ward no 06 Byatarayanapura Sub Division 4) Improvements to roads and drains Rachenahalli and Surrounding area in ward no 06 Byatarayanapura Sub Division 5) Comprehensive development of roads and drains in ward no. 07 Kodigehalli Sub Division ಪ್ಯಾಕೇಜಿನ ರೂ.20.00 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ನಅಇ 185 ಎಂಎನ್‌ವೈ 2017, ದಿನಾಂಕ: 26-12-2017.
2. ಸರ್ಕಾರದ ಆದೇಶ ಸಂಖ್ಯೆ: ನಅಇ 128 ಎಂಎನ್‌ವೈ 2019, ದಿನಾಂಕ: 21-01-2020 ಮತ್ತು ದಿನಾಂಕ: 23-01-2020ರ ತಿದ್ದುಪಡಿ ಆದೇಶ.
3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆಯುಕ್ತರು/ಪಿಆರ್/4017/2020-21, ದಿನಾಂಕ: 16-10-2020.
4. ದಿನಾಂಕ: 14-12-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

* * * * *

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 26-12-2017ರ ಆದೇಶದಲ್ಲಿ, 2017-18ನೇ ಸಾಲಿನಲ್ಲಿ ಬೆಂಗಳೂರಿಗೆ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆಯಡಿ ಒದಗಿಸಿರುವ ರೂ.2191.00 ಕೋಟಿಗಳ ಅನುದಾನದ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಕೆಲವು ಷರತ್ತಿಗೊಳಪಟ್ಟು ಅನುಮೋದನೆ ನೀಡಿದ್ದು, ಸದರಿ ಆದೇಶದ ಅನುಬಂಧ-2ರಲ್ಲಿ 23 ರಸ್ತೆಗಳ ಟೆಂಡರ್ ಶ್ಯೂರ್ ಕಾಮಗಾರಿಗಳಿಗೆ ರೂ.250.00 ಕೋಟಿಗಳ ಅನುದಾನ ನಿಗಧಿಪಡಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 21-01-2020 ಮತ್ತು ದಿನಾಂಕ: 23-01-2020ರ ತಿದ್ದುಪಡಿ ಆದೇಶದಲ್ಲಿ, 2017-18ನೇ ಸಾಲಿನಲ್ಲಿ ಆದೇಶ ಸಂಖ್ಯೆ: ನಅಇ 185 ಎಂಎನ್‌ವೈ 2017, ದಿನಾಂಕ: 26-12-2017ರಂತೆ ಅನುಮೋದಿಸಲಾಗಿರುವ ಕ್ರಿಯಾ ಯೋಜನೆಯ ಅನುಬಂಧ-2ರಲ್ಲಿ ಒಳಗೊಂಡಿರುವ ರೂ.250.00 ಕೋಟಿ ಅಂದಾಜು ವೆಚ್ಚದ 23 ರಸ್ತೆಗಳ ಟೆಂಡರ್ ಶ್ಯೂರ್ ಮಾದರಿ ಅಭಿವೃದ್ಧಿ ಯೋಜನೆಗಳ ಬದಲಾಗಿ 129 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದ್ದು, ಸದರಿ ಆದೇಶದ ಕ್ರಮ ಸಂಖ್ಯೆ:

. . .2/-

109, 110, 111, 112 ಮತ್ತು 113ರ 05 ಕಾಮಗಾರಿಗಳಿಗೆ ಒಟ್ಟು ರೂ.20.00 ಕೋಟಿಗಳ ಅನುದಾನ ನಿಗಧಿಪಡಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 16-10-2020ರ ಪತ್ರದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡ ನಗರಸಭೆ ಮತ್ತು ಪುರಸಭೆ ಪ್ರದೇಶಗಳ ಅಭಿವೃದ್ಧಿಗೆ 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ರೂ.250.00 ಕೋಟಿಗಳ ವೆಚ್ಚದಲ್ಲಿ ಬ್ಯಾಟರಾಯಪುರ ವಿಧಾನಸಭಾ ಕ್ಷೇತ್ರಕ್ಕೆ ಮೀಸಲಿರಿಸಿರುವ ರೂ.52.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಅನುದಾನದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 175 ಎಂಎನ್‌ವೈ 2019ರ ಪ್ರಸ್ತಾವನೆ, ಆದೇಶ ಹಾಗೂ ಷರತ್ತು ಭಾಗಗಳಲ್ಲಿ ನಮೂದಿಸಿರುವ ಆದೇಶ ಸಂಖ್ಯೆ: ನಅಇ 175 ಎಂಎನ್‌ವೈ 2017, ದಿನಾಂಕ: 26-12-2017 ಎಂಬುದರ ಬದಲಾಗಿ ಆದೇಶ ಸಂಖ್ಯೆ: ನಅಇ 185 ಎಂಎನ್‌ವೈ 2017, ದಿನಾಂಕ: 26-12-2017ರ ತಿದ್ದುಪಡಿ ಆದೇಶ ಸಂಖ್ಯೆ: ನಅಇ 128 ಎಂಎನ್‌ವೈ 2019, ದಿನಾಂಕ: 23-01-2020 ಲೆಕ್ಕಶೀರ್ಷಿಕೆ P3158 SIP Infrastructure project works ಅಡಿಯಲ್ಲಿ ಅನುದಾನ ಮಂಜೂರಾಗಿರುತ್ತದೆ.

ಅದರಂತೆ, ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಬ್ಯಾಟರಾಯನಪುರ ವಿಭಾಗ ಕಛೇರಿಯಿಂದ ಟೆಂಡರ್ ಸಂಖ್ಯೆ: EE/BTP/BBMP/E-PMT/03/2020-21, Date: 28.05.2020 ರಂತೆ (Package-3, includes 5 works of Rs.2000.00 lakhs, Indent No.42315) ದ್ವಿಲಕೋಟೆ ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಂತೆ ರೂ.167712221.00 ಲಕ್ಷಗಳಿಗೆ (ಟೆಂಡರ್‌ಗಿಟ್ಟ ಮೊತ್ತ) ಟೆಂಡರ್ ಆಹ್ವಾನಿಸಲಾಗಿರುತ್ತದೆ.

Package-3, includes 5 works of Rs.2000.00 lakhs ಪ್ಯಾಕೇಜ್ ಟೆಂಡರ್ ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 16-07-2020 ರಂದು ತೆರೆಯಲಾಗಿದ್ದು, ಐದು ಜನ ಬಿಡ್‌ದಾರರು ಭಾಗವಹಿಸಿರುತ್ತಾರೆ. ಸದರಿಯವರ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್ಡನ್ನು ತೆರೆಯಲು ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ ಎಂದು ಬಿಬಿಎಂಪಿ ಆಯುಕ್ತರು ತಿಳಿಸಿರುತ್ತಾರೆ.

ಕ್ರ ಸಂ	ಕಾಮಗಾರಿಯ/ ಯೋಜನೆಯ ಹೆಸರು	ಯೋಜನಾ ಮೊತ್ತ ರೂ. (ಲಕ್ಷಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ	ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರು	ಷರಾ
01	Package-3, includes 5 works of Rs.2000.00 lakhs, Indent No. 42315	2000.00	167712221.00	Sri. C R GIRISH (RAM AND COMPANY)	ಅರ್ಹರಾಗಿರುತ್ತಾರೆ
				Sri. S T RAMESH (Ganapathi Stone Crusher)	ಅರ್ಹರಾಗಿರುತ್ತಾರೆ
				Sri. M S VENKATESH (M S V CONSTRUCTIONS COMPANY)	ಅನರ್ಹರಾಗಿರುತ್ತಾರೆ

. . .3/-

				Sri. EARANNA MAMADAPUR (ERANNA MAMADAPUR)	ಅನರ್ಹರಾಗಿರುತ್ತಾರೆ
				Sri. G CHANDRE GOWDA (GOVINDAPPA CHANDRE GOWDA) (DRAFT)	ಅನರ್ಹರಾಗಿರುತ್ತಾರೆ

ಸಭೆಯ ನಿರ್ಣಯದಂತೆ ತಾಂತ್ರಿಕವಾಗಿ ಅರ್ಹರಾದ Sri. C R GIRISH (RAM AND COMPANY) ಮತ್ತು Sri. S T RAMESH (Ganapathi Stone Crusher) ರವರ ಆರ್ಥಿಕ ಬಿಡ್‌ನ್ನು ದಿನಾಂಕ: 25–09–2020 ರಂದು ತೀರ್ಮಾನಿಸಲಾಗಿದ್ದು, ವಿವರ ಕೆಳಕಂಡಂತಿರುತ್ತದೆ ಎಂದು ಬಿಬಿಎಂಪಿ ಆಯುಕ್ತರು ತಿಳಿಸಿರುತ್ತಾರೆ.

ಕ್ರ. ಸಂ	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ)	ಅನುಮೋದಿತ ಎಸ್.ಆರ್. ದರಗಳಿಗೆ ಹೋಲಿಸಿದಾಗ
1	Sri. C R GIRISH (RAM AND COMPANY)	2000.00	167712221.00	175927712.90	4.89% ಹೆಚ್ಚು
2	Sri. S T RAMESH (Ganapathi Stone Crusher)			185587057.04	10.65% ಹೆಚ್ಚು

ಸರ್ಕಾರವು ದಿನಾಂಕ: 26–12–2017ರಲ್ಲಿ ಕಾಮಗಾರಿಗಳ ಪಟ್ಟಿಗೆ ಅನುಮೋದನೆ ನೀಡಿದ್ದು, ತದನಂತರ ಪಾಲಿಕೆಯ ನಿಯಮಗಳಂತೆ ಅಗತ್ಯ ಕ್ರಮಗಳನ್ನು ಕೈಗೆತ್ತಿಕೊಂಡು ಯಲಹಂಕ ವಲಯಕ್ಕೆ ಸೇರಿದ ಬ್ಯಾಟರಾಯನಪುರ ವಿಭಾಗದ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕಾಮಗಾರಿಗಳ ಟೆಂಡರ್ ಪ್ಯಾಕೇಜ್ ಗುತ್ತಿಗೆದಾರರಾದ Sri. C R GIRISH (RAM AND COMPANY) ರವರು ನಮೂದಿಸಿರುವ ಮೊತ್ತ ಟೆಂಡರ್ ಮೊತ್ತ ರೂ.16,77,12,221.00 ಗಳು ಅನುಮೋದಿತ ದರಗಳಿಗೆ ಹೋಲಿಸಿದಾಗ ಶೇ.4.89% ಹೆಚ್ಚಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ಸಲ್ಲಿಸುತ್ತಾ ಸದರಿ ಪ್ಯಾಕೇಜಿನ ಯೋಜನಾ ಮೊತ್ತ ರೂ.2000.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಗುತ್ತಿಗೆದಾರರಾದ Sri. C R GIRISH (RAM AND COMPANY) ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.17,59,27,712.90 ಅನುಮೋದಿತ ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಶೇ.4.89% ಹೆಚ್ಚಾಗಿರುವ ದರಕ್ಕೆ ಅನುಮೋದನೆ ಕೋರಿದೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ: 14–12–2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಮುಂದೆ ಬಿ.ಬಿ.ಎಂ.ಪಿ. ಆಯುಕ್ತರ ದಿನಾಂಕ: 16–10–2020ರ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

. . .4/–

"ವಿವರವಾದ ಚರ್ಚೆಯ ನಂತರ "Package-3, Includes 5 works of Rs.2000.00 Lakhs (T-03)" ಪ್ಯಾಕೇಜಿನ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ, C R GIRISH RAM (Ram And Company)ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.16,77,12,221.34 ಗಳಿಗೆ ಹೋಲಿಸಿದಾಗ 1.00% ಅಧಿಕ ಅಂದರೆ ರೂ.16,93,89,344/- ಗಳಿಗೆ ಮಿತಿಗೊಳಿಸಿ ಅನುಮೋದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು."

ದಿನಾಂಕ: 14-12-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ನಅಇ 232 ಎಂಎನ್‌ವೈ 2020,
ಬೆಂಗಳೂರು, ದಿನಾಂಕ: 25-01-2021.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 128 ಎಂಎನ್‌ವೈ 2019, ದಿನಾಂಕ: 21-01-2020 ಮತ್ತು ದಿನಾಂಕ: 23-01-2020ರ ತಿದ್ದುಪಡಿ ಆದೇಶದಲ್ಲಿ, 2017-18ನೇ ಸಾಲಿನಲ್ಲಿ ಆದೇಶ ಸಂಖ್ಯೆ: ನಅಇ 185 ಎಂಎನ್‌ವೈ 2017, ದಿನಾಂಕ: 26-12-2017ರಂತೆ ಅನುಮೋದಿಸಲಾಗಿರುವ ಕ್ರಿಯಾ ಯೋಜನೆಯ ಅನುಬಂಧ-2ರಲ್ಲಿ ಒಳಗೊಂಡಿರುವ ರೂ.250.00 ಕೋಟಿ ಅಂದಾಜು ವೆಚ್ಚದ 23 ರಸ್ತೆಗಳ ಟೆಂಡರ್ ಶ್ಯೂರ್ ಮಾದರಿ ಅಭಿವೃದ್ಧಿ ಯೋಜನೆಗಳ ಬದಲಾಗಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳ ಕ್ರಿಯಾ ಯೋಜನೆಯನ್ನು ಅನುಮೋದಿಸಿ ಆದೇಶಿಸಿದ್ದು, ಸದರಿ ಆದೇಶದ ಕ್ರಮ ಸಂಖ್ಯೆ: 109, 110, 111, 112 ಮತ್ತು 113ರ ಕಾಮಗಾರಿಗಳನ್ನು ಒಗ್ಗೂಡಿಸಿ ಮಾಡಲಾಗಿರುವ "Package-3, Includes 5 works of Rs.2000.00 Lakhs (T-03)" ಪ್ಯಾಕೇಜಿನ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ, ದಿನಾಂಕ: 14-12-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ C R GIRISH RAM (Ram And Company) ರವರ ಸಂಧಾನಿತ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.16,77,12,221.34 ಗಳಿಗೆ ಹೋಲಿಸಿದಾಗ 1.00% ಅಧಿಕ ಅಂದರೆ ರೂ.16,93,89,344/- (ಹದಿನಾರು ಕೋಟಿ ತೊಂಭತ್ತ ಮೂರು ಲಕ್ಷದ ಎಂಭತ್ತೊಂಭತ್ತು ಸಾವಿರದ ಮೂರುನೂರ ನಲವತ್ತ ನಾಲ್ಕು ರೂಪಾಯಿಗಳು ಮಾತ್ರ) ಗಳಿಗೆ ಮಿತಿಗೊಳಿಸಿ, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಟೆಂಡರ್‌ಗೆ ಅನುಮೋದನೆಯನ್ನು ನೀಡಿದೆ.

ಷರತ್ತುಗಳು:

1. ಕಾಮಗಾರಿಗಳಿಗೆ ಅನುಮೋದನೆ ನೀಡಿರುವ ಟೆಂಡರ್ ಮೊತ್ತಕ್ಕೆ ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರು ಟೆಂಡರ್ ಕರೆಯುವುದು.
2. ಮೇಲಿನ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ / ನಿಯಮಗಳು ಹಾಗೂ ಎಲ್ಲಾ ಚಾಲ್ತಿ ನಿಯಮಗಳನ್ನು ಪಾಲಿಸಿಕೊಂಡು ಅನುಷ್ಠಾನಗೊಳಿಸುವುದು.
3. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 128 ಎಂಎನ್‌ವೈ 2019, ದಿನಾಂಕ: 21-01-2020 ಮತ್ತು ದಿನಾಂಕ: 23-01-2020ರ ತಿದ್ದುಪಡಿ ಆದೇಶದಲ್ಲಿ ಅನುಮೋದಿಸಿರುವಂತೆ ಭರಿಸುವುದು.
4. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
5. ಕರ್ನಾಟಕ ಆರ್ಥಿಕ ಸಂಹಿತೆ 1958 ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳುಸಾರ ಕ್ರಮವಹಿಸತಕ್ಕದ್ದು.

. . .5/-

6. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸಹ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಅನುಮೋದನೆ ಗೊಂಡಿರುವ ಕಾಮಗಾರಿಯನ್ನಲ್ಲದೆ ಯಾವುದೇ ಕಾರಣಕ್ಕೆ ಬೇರೆ ಕಾಮಗಾರಿಗಳನ್ನು ಕೈಗೊಳ್ಳಬಾರದು.
7. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
8. ದಿನಾಂಕ: 14–12–2020ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.
9. ಸದರಿ ಬಿಡ್ದುದಾರರು ಅಥವಾ ಇನ್ಯಾವುದೇ ಹಂತದಲ್ಲಿ ತಪ್ಪು ಮಾಹಿತಿ / ದಾಖಲೆ ನೀಡಿರುವುದು ಕಂಡುಬಂದಲ್ಲಿ ಟೆಂಡರ್‌ಅನ್ನು ರದ್ದುಪಡಿಸಲು ಬಿಬಿಎಂಪಿ ಆಯುಕ್ತರು ನಿಯಮಾನುಸಾರ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀಸಾಗರ್ ಎನ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 ಮತ್ತು 9), ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
10. ಸರ್ಕಾರದ ಜಂಟಿ ಕಾರ್ಯದರ್ಶಿಗಳು ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
11. ಕಾರ್ಯಪಾಲಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.